ಸಾಕ್ಷಿಯನ್ನು ದಿನಾಂಕಃ 30-03-2022 ರಂದು ಕರೆದು ಪ್ರಮಾಣ ವಚನ ಮಾಡಿಸಲಾಯಿತು.

**ಮುಖ್ಯ ವಿಚಾರಣೆ ಃ ಶ್ರೀ.ಎಸ್.ಸಿ.ಯು., ವಾದಿ ಪರ ವಕೀಲರಿಂದಃ**

**ನಾನು ಮುಖ್ಯ ವಿಚಾರಣೆಯಾಗಿ ಸಲ್ಲಿಸಿದ ಪ್ರಮಾಣಪತ್ರದಲ್ಲಿ ಇರುವ ಅಂಶಗಳನ್ನು ನಾನೇ ವಕೀಲರಿಗೆ ಹೇಳಿ ಬರೆಸಿರುತ್ತೇನೆ ಮತ್ತು ಸದರೀ ಅಂಶಗಳು ಸತ್ಯವಾಗಿರುತ್ತವೆ.**

ನಾನು ಈ ದಿನ ದಾವೆಗೆ ಸಂಬಂಧಿಸಿದಂತೆ ಆರ್.ಎಸ್.ನಂ.97/4 ರ ಪಹಣಿ ಪತ್ರಿಕೆ ಹಾಜರುಪಡಿಸಿದ್ದು ಅದನ್ನು ನಿ.ಪಿ. 1 ಎಂದು ಗುರುತಿಸಲಾಯಿತು. ದಾವೆಗೆ ಸಂಬಂಧಿಸಿದಂತೆ ಎಮ್.ಆರ್.ನಂ.ಎಚ್.26/2018-19 ರನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ. 2 ಎಂದು ಗುರುತಿಸಲಾಯಿತು. ಆರ್.ಎಸ್.ನಂ.194/1 ರ ಪಹಣಿ ಪತ್ರಿಕೆ ಹಾಜರುಪಡಿಸಿದ್ದು ಅದನ್ನು ನಿ.ಪಿ. 3 ಎಂದು ಗುರುತಿಸಲಾಯಿತು. ದಾವೆಗೆ ಸಂಬಂಧಿಸಿದಂತೆ ಎಮ್.ಆರ್.ನಂ.206 ರನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ. 4 ಎಂದು ಗುರುತಿಸಲಾಯಿತು. ಗ್ರಾಮ ಪಂಚಾಯತ ಮಾಚಕನೂರ ಅವರು ನೀಡಿದ ದಾವಾ ಆಸ್ತಿ ವಿ.ಪಿ.ಸಿ.ನಂ. 68 ರ ಮೂಲ ಪ್ರತಿಯನ್ನು ನಿ.ಪಿ. 5 ಎಂದು ಗುರುತಿಸಲಾಯಿತು. ಗ್ರಾಮ ಪಂಚಾಯತ ಮಾಚಕನೂರ ಅವರು ನೀಡಿದ ದಾವಾ ಆಸ್ತಿ ವಿ.ಪಿ.ಸಿ.ನಂ. 267 ರ ಮೂಲ ಪ್ರತಿಯನ್ನು ನಿ.ಪಿ. 6 ಎಂದು ಗುರುತಿಸಲಾಯಿತು. ದಾವಾ ಆಸ್ತಿ ವಿ.ಪಿ.ಸಿ.ನಂ. 61 ರ ಮೂಲ ಪ್ರತಿಯನ್ನು ನಿ.ಪಿ. 7 ಎಂದು ಗುರುತಿಸಲಾಯಿತು. ಗ್ರಾಮ ಲೆಕ್ಕಾಧಿಕಾರಿ ಆಲಗುಂದಿ ಬಿ.ಕೆ. ಅವರು ನೀಡಿದ ವಂಶಾವಳಿ ಪ್ರತಿಯನ್ನು ಹಾಜರುಪತಿಸಿದ್ದು ಅದನ್ನು ನಿ.ಪಿ. 8 ಎಂದು ಗುರುತಿಸಲಾಯಿತು.

ಪ್ರತಿವಾದಿ ಪರ ವಕೀಲರು ಪ್ರತಿವಾದ ಪತ್ರ ಹಾಕದೆ ಇರುವ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ದಿವಾಣಿ ನ್ಯಾಯಾಧೀಶರು
ಮುಧೋಳ.

ಸಾಕ್ಷಿಯ ಸಹಿಃ